**National**
**Kannada**
**07.09.2025 1.10 p.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಸಹಕಾರ ಕ್ಷೇತ್ರದ ಬಲವರ್ಧನೆಯಲ್ಲಿ ಜಿಎಸ್‌ಟಿ ಸುಧಾರಣೆಗಳ ಪಾತ್ರ ಪ್ರಮುಖ - ಸಹಕಾರ ಸಚಿವಾಲಯ
2. ದಶಕದ ಅತ್ಯಂತ ದೀರ್ಘವಾದ ಸಂಪೂರ್ಣ ಚಂದ್ರಗ್ರಹಣ ಇಂದು ರಾತ್ರಿ ಗೋಚರ
3. ಪಂಜಾಬ್‌ನಲ್ಲಿ ಪ್ರವಾಹ ಸ್ವಲ್ಪಮಟ್ಟಿಗೆ ಸುಧಾರಣೆ: ಭರದಿಂದ ಸಾಗಿರುವ ಪರಿಹಾರ ಕಾರ್ಯ
4. ಯುಎಸ್ ಓಪನ್ ಟೆನ್ನಿಸ್: ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿಂದು ಸಿನ್ನರ್-ಅಲ್ಕರಾಜ್ ಮುಖಾಮುಖಿ

<><><><>

ಸರಕು ಮತ್ತು ಸೇವಾ ತೆರಿಗೆ - ಜಿಎಸ್‌ಟಿ ಸುಧಾರಣೆಗಳು ಸಹಕಾರ ಕ್ಷೇತ್ರವನ್ನು ಬಲಪಡಿಸಲಿದ್ದು, ಅವರ ಉತ್ಪನ್ನಗಳನ್ನು ಸ್ಪರ್ಧಾತ್ಮಕವಾಗಿಸಿ, ಅವುಗಳ ಬೇಡಿಕೆಯನ್ನು ಹೆಚ್ಚಿಸಿ, ಸಹಕಾರ ಸಂಸ್ಥೆಗಳ ಆದಾಯವನ್ನು ವೃದ್ಧಿಸುವುದಾಗಿ ಸರ್ಕಾರ ತಿಳಿಸಿದೆ. ಜಿಎಸ್‌ಟಿ ಸುಧಾರಣೆಗಳು ಗ್ರಾಮೀಣ ಉದ್ಯಮಶೀಲತೆಯನ್ನು ಉತ್ತೇಜಿಸಿ, ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ಸಹಕಾರ ಸಂಘಗಳನ್ನು ಪ್ರೋತ್ಸಾಹಿಸುವುದರಂದಿಗೆ, ಲಕ್ಷಾಂತರ ಕುಟುಂಬಗಳಿಗೆ ಅಗತ್ಯ ವಸ್ತುಗಳು ಸುಲಭ ಮತ್ತು ಅಗ್ಗದ ಬೆಯಲ್ಲಿ ಕೈಗೆಟುಕುವುದನ್ನು ಖಚಿತಪಡಿಸುವುದಾಗಿ ಸಹಕಾರ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಈ ಸುಧಾರಣೆಗಳು ನೇರವಾಗಿ ಸಹಕಾರ ಸಂಘಗಳು, ರೈತರು, ಗ್ರಾಮೀಣ ಉದ್ಯಮಗಳಿಗೆ ಲಾಭದಾಯಕವಾಗಲಿವೆ. ದೇಶದ ೧೦ ಕೋಟಿಗೂ ಅಧಿಕ ಹಾಲು ಉತ್ಪಾದಕರಿಗೆ ಲಾಭದಾಯಕವಾಗಲಿದೆ ಎಂದು ಸಹಕಾರ ಸಚಿವಾಲಯ ತಿಳಿಸಿದೆ.

<><><><>

ದಶಕದ ಅತ್ಯಂತ ದೀರ್ಘವಾದ ಸಂಪೂರ್ಣ ಚಂದ್ರಗ್ರಹಣ ಇಂದು ರಾತ್ರಿ ಗೋಚರಿಸಲಿದೆ. ಈ ಗ್ರಹಣ ದೆಹಲಿ, ಮುಂಬೈ, ಕೊಲ್ಕತ್ತಾ, ಬೆಂಗಳೂರು ಸೇರಿದಂತೆ ಭಾರತದಾದ್ಯಂತ ಎಲ್ಲ ಪ್ರಮುಖ ನಗರಗಳಲ್ಲಿ ಸ್ಪಷ್ಟವಾಗಿ ಕಾಣಿಸಲಿದೆ. ಜೊತೆಗೆ ಏಷ್ಯಾ, ಆಸ್ಟ್ರೇಲಿಯಾ, ಪೂರ್ವ ಆಫ್ರಿಕಾ ಮತ್ತು ಯುರೋಪಿನ ಕೆಲವು ಭಾಗಗಳಲ್ಲಿಯೂ ಗೋಚರವಾಗಲಿದೆ.

<><><><>

ಪಂಜಾಬ್‌ನಲ್ಲಿ ಉಂಟಾಗಿರುವ ಭಾರಿ ಪ್ರವಾಹ, ಸ್ವಲ್ಪಮಟ್ಟಿಗೆ ಸುಧಾರಿಸಿದ್ದರೂ, ಸಾವಿನ ಸಂಖ್ಯೆ ಏರಿತ್ತಲೆ ಇದೆ. ಪ್ರವಾಹದಿಂದ ಭಾರೀ ನಷ್ಟ ಅನುಭವಿಸುತ್ತಿರುವ ಪಂಜಾಬ್‌ನಲ್ಲಿ ಕಳೆದ ೨೪ ಗಂಟೆಗಳಲ್ಲಿ ಅಮೃತ್‌ಸರ್ ಮತ್ತು ರೂಪನಗರ ಜಿಲ್ಲೆಗಳಲ್ಲಿ ಇನ್ನೂ ಮೂರು ಮಂದಿ ಸಾವನ್ನಪ್ಪಿದ್ದು, ಒಟ್ಟು ಸಾವಿನ ಸಂಖ್ಯೆ ೪೬ಕ್ಕೆ ಏರಿಕೆಯಾಗಿದೆ. ಪಠಾಣ್ಕೋಟ್ ಜಿಲ್ಲೆಯಲ್ಲಿ ಇನ್ನೂ ಮೂವರು ನಾಪತ್ತೆಯಾಗಿರುವ ವರದಿಯಾಗಿದೆ. ಭಾರತೀಯ ಸೇನೆ, ವಾಯುಪಡೆ, ಎನ್‌ಡಿಆರ್‌ಎಫ್ ಮತ್ತು ಬಿಎಸ್‌ಎಫ್ ವಿಶೇಷ ತಂಡಗಳ ಸಹಾಯದಿಂದ ಈಗವರೆಗೆ ೨೩ ಸಾವಿರ ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರ ಹಾಗೂ ಹಿಮಾಚಲ ಪ್ರದೇಶದ ಸಂಕಷ್ಟದಲ್ಲಿರುವ ಪ್ರದೇಶಗಳಲ್ಲಿ ಭಾರತೀಯ ವಾಯುಪಡೆ ಮಾನವೀಯ ಸಹಾಯ ಕಾರ್ಯಾಚರಣೆ ಕೈಗೊಂಡಿದೆ. ಜಮ್ಮು ಮತ್ತು ಕಾಶ್ಮೀರದ ಉಧಂಪುರದಲ್ಲಿ ವಾಯುಪಡೆ ೫.೯ ಟನ್ ಅಗತ್ಯ ಆಹಾರ ಸಾಮಗ್ರಿಗಳನ್ನು ವಿಮಾನದ ಮೂಲಕ ತಲುಪಿಸುವ ಕಾರ್ಯಾ ನಡೆಸಿದೆ. ಗುರುದಾಸ್ಪುರ್, ಫಜಿಲ್ಕಾ, ಫಿರೋಜ್‌ಪುರ್, ಅಮೃತಸರ, ಕಪೂರ್‌ಥಲಾ ಮತ್ತು ತರ್ಣ್‌ತಾರನ್ ಜಿಲ್ಲೆಗಳು ಗ್ರಾಮಗಳು, ಅತಿ ಹೆಚ್ಚು ಹಾನಿಗೀಡಾಗಿವೆ. ಸ್ಥಳೀಯರು ಮತ್ತು ಸ್ವಯಂಸೇವಕ ಸಂಸ್ಥೆಗಳ ಸಹಾಯದಿಂದ ರಕ್ಷಣಾ ಮತ್ತು ಪರಿಹಾರ ಕಾರ್ಯಗಳು ನಡೆಯುತ್ತಿದ್ದು. ಪಂಜಾಬ್ ರಾಜ್ಯದ ಹಾಲು ಸಹಕಾರ ಸಂಸ್ಥೆ ಮಿಲ್ಕ್‌ಫೆಡ್ ಕೂಡ ಹಾಲು ಉತ್ಪಾದಕರಿಗೆ ಮತ್ತು ಪಶುಸಂಪತ್ತಿಗೆ ಸಹಾಯ ಮಾಡಲು ಎರಡು ಹಂತದ ವಿಶೇಷ ಕಾರ್ಯತಂತ್ರವನ್ನು ಜಾರಿಗೆ ತಂದಿದೆ.

<><><><>

ನವದೆಹಲಿಯಲ್ಲಿ ಇಂದು ಭಾರತೀಯ ರೈಲ್ವೆಯ ಸಹಯೋಗದೊಂದಿಗೆ ಗರ್ವ್ ಸೇ ಸ್ವದೇಶಿ ಎಂಬ ಧ್ಯೇಯವಾಕ್ಯದೊಂದಿಗೆ ಫಿಟ್ ಇಂಡಿಯಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಯುವಜನ ಮತ್ತು ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಮಾತನಾಡಿ, ಸಂಡೇಸ್ ಆನ್ ಸೈಕಲ್ ಒಂದು ಆಂದೋಲನವಾಗಿದೆ. ಆರೋಗ್ಯವಂತರಾಗಿರಲು ಮತ್ತು ಸ್ವದೇಶಿ ಮನೋಭಾವವನ್ನು ಉತ್ತೇಜಿಸಲು ೫೦ ಕ್ಕೂ ಹೆಚ್ಚು ಸಂಸದರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಸ್ವದೇಶಿಯ ಸಂದೇಶವನ್ನು ಪಸರಿಸಿದರು ಎಂದು ಹೇಳಿದರು. ದೇಶಾದ್ಯಂತ ಎಂಟು ಸಾವಿರಕ್ಕೂ ಹೆಚ್ಚು ಸ್ಥಳಗಳಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಇದು ಮಾಲಿನ್ಯಕ್ಕೂ ಪರಿಹಾರವಾಗಿದೆ ಎಂದು ಮನ್ಸುಖ್ ಮಾಂಡವೀಯ ತಿಳಿಸಿದರು.

<><><><>

ಗಸ್ತು ತಿರುಗುತ್ತಿರುವ ರಾಷ್ಟ್ರೀಯ ಭದ್ರತಾ ಪಡೆಗಳ ನಿಯೋಜನೆಯನ್ನು ಕೊನೆಗೊಳಿಸಬೇಕೆಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಒತ್ತಾಯಿಸಿ ನಿನ್ನೆ ವಾಷಿಂಗ್ಟನ್ ಡಿ.ಸಿ.ಯಲ್ಲಿ ಸಾವಿರಾರು ಪ್ರತಿಭಟನಾಕಾರರು ಪ್ರತಿಭಟನಾ ಮೆರವಣಿಗೆ ನಡೆಸಿದರು. ಡೆಮಾಕ್ರಟಿಕ್ ಪಕ್ಷದ ಆಡಳಿತವಿರುವ ಇತರ ನಗರಗಳಲ್ಲಿಯೂ ಶಿಸ್ತುಕ್ರಮ ಕೈಗೊಳ್ಳುವುದಾಗಿ ಟ್ರಂಪ್ ತಿಳಿಸುವುದರೊಂದಿಗೆ, ಸಾಮಾಜಿಕ ಮಾಧ್ಯಮದಲ್ಲಿ ಚಿಕಾಗೋಗೆ ವಲಸಿಗರನ್ನು ಗಡಿಪಾರು ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ದಾಖಲೆರಹಿತ ವಲಸಿಗರು ಮತ್ತು ಪ್ಯಾಲೆಸ್ತೈನ್ ಬೆಂಬಲಿಗರು ಸೇರಿದಂತೆ "ನಾವೆಲ್ಲರೂ ಡಿ.ಸಿ." ಎಂಬ ಮೆರವಣಿಗೆಯಲ್ಲಿ ಪ್ರತಿಭಟನಾಕಾರರು ಭಿತ್ತಿಪತ್ರಗಳನ್ನು ಹಿಡಿದು ಟ್ರಂಪ್ ಅವರನ್ನು ಖಂಡಿಸುವ ಘೋಷಣೆಗಳನ್ನು ಕೂಗಿದರು. ನಗರಗಳಲ್ಲಿ ಅಪರಾಧ ಪ್ರಕರಣಗಳು ಹೆಚ್ಚುತ್ತಿವೆ ಎಂದಿರುವ ಅಧ್ಯಕ್ಷ ಟ್ರಂಪ್, ಕಳೆದ ತಿಂಗಳು ಕಾನೂನು, ಸುವ್ಯವಸ್ಥೆ ಮತ್ತು ಸಾರ್ವಜನಿಕ ಸುರಕ್ಷತೆಯನ್ನು ಪುನಃ ಸ್ಥಾಪಿಸಲು ರಾಷ್ಟ್ರೀಯ ಪಡೆಗಳನ್ನು ನಿಯೋಜಿಸಿದರು. ಚಿಕಾಗೋದಲ್ಲಿ ಅಪರಾಧದ ವಿರುದ್ಧ ಕ್ರಮಕೈಗೊಳ್ಳಲು ರಾಷ್ಟ್ರೀಯ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ. ಆರು ರಿಪಬ್ಲಿಕನ್ ಪಕ್ಷದ ಆಡಳಿತದ ರಾಜ್ಯಗಳಿಂದ ಸೇರಿದಂತೆ ೨ ಸಾವಿರಕ್ಕೂ ಹೆಚ್ಚು ಸೈನಿಕರು ನಗರದಲ್ಲಿ ಗಸ್ತು ತಿರುಗುತ್ತಿದ್ದಾರೆ.

<><><>

ನ್ಯೂಯಾರ್ಕ್‌ನಲ್ಲಿ ನಡೆಯುತ್ತಿರುವ ಯುಎಸ್ ಓಪನ್ ಗ್ರ್ಯಾಂಡ್ ಸ್ಲಾಮ್ ಟೆನ್ನಿಸ್ ಟೂರ್ನಿಯ ಪುರುಷರ ಸಿಂಗಲ್ಸ್‌ನಲ್ಲಿ ಇಟಲಿಯ ಯಾನಿಕ್ ಸಿನ್ನರ್ ಕೆನಡಾದ ಫೆಲಿಕ್ಸ್ ಔಗರ್-ಅಲಿಯಾಸಿಮ್ ಅವರನ್ನು ೬-೧, ೩-೬, ೬-೩, ೬-೪ ಅಂಕಗಳಲ್ಲಿ ನಾಲ್ಕು ಸೆಟ್‌ಗಳ ಹೋರಾಟದಲ್ಲಿ ಸೋಲಿಸಿ ಫೈನಲ್‌ಗೆ ಪ್ರವೇಶ ಪಡೆದಿದ್ದಾರೆ. ಇಂದು ರಾತ್ರಿ ನಡೆಯುವ ಫೈನಲ್‌ನಲ್ಲಿ ಸಿನ್ನರ್, ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರ ವಿರುದ್ಧ ಪ್ರಶಸ್ತಿಗಾಗಿ ಸೆಣಸಾಟ ನಡೆಸಲಿದ್ದಾರೆ. ಇನ್ನು ಮಹಿಳಾ ಸಿಂಗಲ್ಸ್‌ನಲ್ಲಿ ವಿಶ್ವದ ಅಗ್ರ ಶ್ರೇಯಾಂಕಿತ ಟೆನಿಸ್ ಆಟಗಾರ್ತಿ ಅರೆನಾ ಸಬಲೆಂಕಾ ಯುಎಸ್ ಓಪನ್ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಮಹಿಳೆಯರ ಫೈನಲ್ಸ್ ವಿಭಾಗದಲ್ಲಿ ಅವರು, ಅಮಾಂಡಾ ಅನಿಸಿಮೋವಾ ಅವರನ್ನು ೬-೩, ೭-೬ ಸೆಟ್‌ಗಳಿಂದ ಪರಾಭವಗೊಳಿಸಿದ್ದಾರೆ. ಈ ಮೂಲಕ ಸಬಲೆಂಕಾ ೪ನೇ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

<><><>

ಬಿಹಾರದಲ್ಲಿ ನಡೆಯುತ್ತಿರುವ ಏಷ್ಯಾಕಪ್ ಹಾಕಿ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಪುರುಷರ ತಂಡ ಫೈನಲ್ ಪ್ರವೇಶಿಸಿದೆ. ರಾಜಗಿರ್‌ನಲ್ಲಿ ನಿನ್ನೆ ಸಂಜೆ ನಡೆದ ಸೂಪರ್ ೪ರ ಕೊನೆಯ ಪಂದ್ಯದಲ್ಲಿ ಭಾರತ ತಂಡ ಚೀನಾ ವಿರುದ್ಧ ೭-೦ ಅಂತರದಿಂದ ಭರ್ಜರಿ ಗೆಲುವು ಸಾಧಿಸಿದೆ. ಈ ಗೆಲುವಿನೊಂದಿಗೆ ಭಾರತ ಸೂಪರ್ ೪ರ ಅಗ್ರಸ್ಥಾನವನ್ನು ಭದ್ರಪಡಿಸಿಕೊಂಡಿದೆ. ನಿನ್ನೆ ನಡೆದ

ಮತ್ತೊಂದು ಸೂಪರ್ ೪ರ ಹಂತದ ಪಂದ್ಯದಲ್ಲಿ ದಕ್ಷಿಣ ಕೊರಿಯಾ ೪-೩ ಅಂಕಗಳಿಂದ ಮಲೇಶಿಯಾ ವಿರುದ್ಧ ಜಯ ಸಾಧಿಸಿತು. ಇಂದು ಸಂಜೆ ೭:೩೦ಕ್ಕೆ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ದಕ್ಷಿಣ ಕೊರಿಯಾ ತಂಡಗಳು ಮುಖಾಮುಖಿಯಾಗಲಿವೆ.

<><><><>

ಇಂಗ್ಲೆಂಡ್‌ನ ಲಿವರ್‌ಪೂಲ್‌ನಲ್ಲಿ ನಡೆಯುತ್ತಿರುವ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ನಿಖತ್ ಜರೀನ್ ಗೆಲುವಿನ ನಗೆ ಬೀರಿದ್ದಾರೆ. ಮಹಿಳಾ ೫೧ ಕೆಜಿ ವಿಭಾಗದಲ್ಲಿ ಭಾರತದ ಬಾಕ್ಸರ್ ನಿಖತ್ ಜರೀನ್ ಮೊದಲ ಸುತ್ತಿನ ಪಂದ್ಯದಲ್ಲಿ ಗೆಲುವು ಸಾಧಿಸಿದ್ದಾರೆ. ಅವರು, ಅಮೆರಿಕದ ಜೆನಿಫರ್ ಲೋಜಾನೋ ವಿರುದ್ಧ ೫-೦ ಅಂಕಗಳಿಂದ ಗೆಲುವು ದಾಖಲಿಸಿದ್ದು, ಇದೀಗ ಪೂರ್ವ-ಕ್ವಾರ್ಟರ್‌ಫೈನಲ್ ಹಂತದಲ್ಲಿ ಜಪಾನ್‌ನ ಯುನಾ ನಿಶಿನಾಕಾ ವಿರುದ್ಧ ಮುಖಾಮುಖಿಯಾಗಲಿದ್ದಾರೆ. ಮಹಿಳಾ ೬೦ ಕೆಜಿ ವಿಭಾಗದ ಪಂದ್ಯದಲ್ಲಿ ಸಂಜು, ಪೋಲೆಂಡ್‌ನ ಅನೇಟಾ ರಿಗಿಯೆಲ್ಸ್ಕಾ ವಿರುದ್ಧ ಸೋತು ಟೂರ್ನಿಯಿಂದ ಹೊರ ನಡೆದರು. ಪುರುಷರ ೭೦ ಕೆಜಿ ವಿಭಾಗದಲ್ಲಿ ಹಿತೇಶ್ ಗೂಲಿಯಾ ಕೂಡ ನೆದರ್‌ಲ್ಯಾಂಡ್ಸ್‌ನ ಫಿನ್ನ್ ರಾಬರ್ಟ್ ಬೋಸ್ ವಿರುದ್ಧ ೧-೪ ಅಂಕಗಳಿಂದ ಸೋಲು ಕಂಡಿದ್ದಾರೆ. ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ಗಾಗಿ ಭಾರತ, ೨೦ ಸದಸ್ಯರ ತಂಡವನ್ನು ಕಳುಹಿಸಿದ್ದು, ೬೫ಕ್ಕೂ ಹೆಚ್ಚು ರಾಷ್ಟ್ರಗಳಿಂದ ೫೫೦ಕ್ಕೂ ಅಧಿಕ ಬಾಕ್ಸರ್‌ಗಳು ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿದ್ದಾರೆ. ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>